ದಿನಾಂಕಃ **28.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : **2** ನೇ ಪ್ರತಿವಾದಿಯ ಪರ ವಕೀಲರಿಂದಃ

02. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲವೆಂದರೆ ಸರಿ. ನನಗೆ ಆದಾಯ ಬರುವ ಯಾವುದೇ ಮೂಲಗಳು ಇಲ್ಲವೆಂದರೆ ಸರಿ. ನಾನು ಮುಂಚೆಯಿಂದಲೂ ಕೂಲಿ ಕೆಲಸ ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ಕಾಳಮ್ಮನಿಗೆ ದಾವಾ ಸ್ವತ್ತು ಮಾತ್ರವಲ್ಲದೆ ಸುಮಾರು 28 ಎಕರೆ ಬೇರೆ ಜಮೀನು ಕೂಡ ಇದೆ ಎಂದರೆ ಸರಿ. 1 ನೇ ಪ್ರತಿವಾದಿಯ 20 ಎಕರೆ ಜಮೀನನ್ನು ಆಕೆಯ ಮಕ್ಕಳು ತಲಾ 10 ಎಕರೆ ಹಂಚಿಕೊಂಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ 3 ಜನ ಹೆಣ್ಣುಮಕ್ಕಳು ಮತ್ತು 2 ಗಂಡು ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿಯ ಹಿರಿಯ ಮಗ ಬ್ಯಾಂಕ್ ಮ್ಯಾನೇಜರ್ ಆಗಿ ನಿವೃತ್ತರಾಗಿದ್ದಾರೆ ಎಂದರೆ ಸರಿ. 2 ನೇ ಮಗ ಸೋಗಿ ಗ್ರಾಮದಲ್ಲಿ ಮೆಡಿಕಲ್ ಶಾಪ್ ಇಟ್ಟಿದ್ದಾನೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳು ಆರ್ಥಿಕವಾಗಿ ಚೆನ್ನಾಗಿಯೇ ಇದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸುಮಾರು 82 ವರ್ಷ ವಯಸ್ಸು ಎಂದರೆ ಎಷ್ಟು ವಯಸ್ಸೆಂದು ಗೊತ್ತಿಲ್ಲ ಆದರೆ 1 ನೇ ಪ್ರತಿವಾದಿ ವಯಸ್ಸಿನಲ್ಲಿ ನನಗಿಂತ ಹಿರಿಯಳು. ಆಕೆ ವಯಸ್ಸಿನಲ್ಲಿ ನನಗಿಂತ 10-15 ವರ್ಷ ಹಿರಿಯಳು ಎಂದರೆ ಇರಬಹುದು. 2010 ರಿಂದ 1 ನೇ ಪ್ರತಿವಾದಿ ಸೋಗಿ ಗ್ರಾಮವನ್ನು ತೊರೆದು ತನ್ನ ಹೆಣ್ಣುಮಕ್ಕಳ ಜೊತೆಯಲ್ಲಿ ವಾಸ ಮಾಡುತ್ತಿದ್ದಾಳೆ ಎಂದರೆ ಸರಿ. ನಾನು 2010 ರಿಂದ ಇವತ್ತಿನವರೆಗೆ 1 ನೇ ಪ್ರತಿವಾದಿಯನ್ನು ನೋಡೇ ಇಲ್ಲ ಎಂದರೆ ಸರಿ.

03. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಆಕೆಯ ಗಂಡ ಹಾಲಯ್ಯನೇ ಹಣ ಕೊಟ್ಟು ಖರೀದಿ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ನಾನು ಕಾಳಮ್ಮನ ವಿರುದ್ಧ ಮಾತ್ರ ಸಲ್ಲಿಸಿದ್ದೇನೆ ಬೇರೆ ಯಾರ ವಿರುದ್ಧವೂ ಸಲ್ಲಿಸಿಲ್ಲ. 2022 ರಲ್ಲಿ ಈ ದಾವೆ ಹಾಕುವ ಮುಂಚೆ ನನ್ನ ವಕೀಲರಿಗೆ ದಾವಾ ಸಲ್ಲಿಸುವ ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ದಾವಾ ಸ್ವತ್ತಿನ ವ್ಯವಹಾರವು ದಿನಾಂಕ 21.05.2016 ರಂದು ನಡೆದಿತ್ತು. ಸದರಿ ವ್ಯವಹಾರವು ಸೋಗಿ ಗ್ರಾಮದಲ್ಲಿ ನಡೆದಿತ್ತು . ಸದರಿ ವ್ಯವಹಾರದ ಮಾತು-ಕತೆ ಮಧ್ಯಾಹ್ನ 2-2.30 ಗಂಟೆಗೆ ನಡೆದಿತ್ತು. ಆ ವ್ಯವಹಾರದಲ್ಲಿ 1 ನೇ ಪ್ರತಿವಾದಿಯ ಕಡೆಯವರಾಗಿ ಆಕೆಯ ಇಬ್ಬರು ಗಂಡು ಮಕ್ಕಳೂ ಹಾಜರಿದ್ದರು. ಕಾಳಮ್ಮನ ಮಕ್ಕಳು ಕ್ರಯದ ಕರಾರು ಪತ್ರಕ್ಕೆ ಸಹಿಗಳನ್ನು ಮಾಡಲಿಲ್ಲ. ಆ ಸಮಯದಲ್ಲಿ ಇನ್ನೂ ಬೇರೆ ಯಾರು ಯಾರು ಇದ್ದರು ಎಂದರೆ ಕೊಟ್ರಪ್ಪ ತಂದೆ ಮೈಲಪ್ಪ, ದಂಡಪ್ಪ ತಾಯಿ ಗಾಳೆಮ್ಮ, ಮಂಜಣ್ಣ ತಂದೆ ಈಶಣ್ಣ ಕೂಡ ಹಾಜರಿದ್ದರು. ವ್ಯವಹಾರದ ಮಾತು-ಕತೆಗೆ ಕಾಳಮ್ಮನನ್ನು ಮತ್ತು ಸಾಕ್ಷಿಗಳಾಗಿ ಹಾಜರಿದ್ದ

ಮುಖಂಡರನ್ನು ನಾನೇ ಕರೆತಂದಿದ್ದೆ. ನಾನು ಕರೆದು ತರುವ ಮುಂಚೆ ಅವರೆಲ್ಲರೂ ಅವರವರ ಮನೆಗಳಲ್ಲಿ ಇದ್ದರು. ಹೊಲ ಕೊಡುತ್ತೇವೆಂದು ಹೇಳಿದ್ದಾರೆ, ನಾವು ಹಣ ಕೊಡುತ್ತೇವೆ ಆದ್ದರಿಂದ ಬನ್ನಿ ಎಂದು ಸಾಕ್ಷಿಗಳನ್ನು ಕರೆದಿದ್ದೆ. ಕೊಟ್ರಪ್ಪ ಮತ್ತು ದಂಡಪ್ಪ ನನಗೆ ಸಂಬಂಧಿಕರು ಎಂದರೆ ಅಲ್ಲ, ಕುಲಸ್ಥರು ಮಾತ್ರ. ಇವರಲ್ಲಿ ನಾನು, ಕೊಟ್ರಪ್ಪ ಮತ್ತು ದಂಡಪ್ಪ ಒಂದೇ ಓಣಿಯಲ್ಲಿ ವಾಸ ಮಾಡುತ್ತೇವೆ, ಮಂಜಣ್ಣ ಬೇರೆ ಓಣಿಯಲ್ಲಿ ವಾಸ ಮಾಡುತ್ತಾರೆ. ಸದರಿ ಮಂಜುನಾಥ ಅಡವಿಮಲ್ಲಿನಕೇರಿ ಗ್ರಾಮದವರು, ನಮ್ಮ ಊರಿನವರಲ್ಲ ಎಂದರೆ ಸರಿ. ಸೋಗಿಯಿಂದ ಅಡವಿಮಲ್ಲಿನಕೇರಿ ಸುಮಾರು 4 ಕಿ.ಮೀ. ದೂರವಿರುತ್ತದೆ. ಅವರು ನಮ್ಮ ಊರಿನಲ್ಲೇ ವಾಸ ಮಾಡುತ್ತಿದ್ದಾರೆ. ದಂಡಪ್ಪ ಮತ್ತು ಕೊಟ್ರಪ್ಪ ನನಗೆ ಎಂತಹ ಸಂದರ್ಭದಲ್ಲೂ ಸಹಾಯ ಮಾಡುತ್ತಾರೆ ಎಂದರೆ ಸರಿ.

04. ನಿಪಿ1 ರ ಬಾಂಡ್ ಪೇಪರ್ ನ್ನು ಹರಪನಹಳ್ಳಿಯಿಂದ ನಾನೇ ಖರೀದಿ ಮಾಡಿ ತಂದಿದ್ದೆ. ವ್ಯವಹಾರದ ಮಾತು-ಕತೆ ಮುಗಿದ ನಂತರ ಬಾಂಡ್ ಪೇಪರ್ ತಂದಿದ್ದೆ. ವ್ಯವಹಾರದ ಮಾತು-ಕತೆ ಸಂಜೆ ಸುಮಾರು 5 ಗಂಟೆಗೆ ಮುಗಿದಿತ್ತೇ? ಎಂದರೆ ಹೌದು. ಅದೇ ದಿನ ಸಂಜೆ ಹರಪನಹಳ್ಳಿಗೆ ಹೋಗಿ ಬಾಂಡ್ ಪೇಪರ್ ಖರೀದಿಸಿ ತಂದಿದ್ದೆ. ಅದು 100 ರೂಪಾಯಿ ಬಾಂಡ್ ಪೇಪರ್. ನಾನು ಬಾಂಡ್ ಪೇಪರ್ ನ್ನು ಖರೀದಿಸಿ ರಾತ್ರಿ 8 ಗಂಟೆಗೆ ವಾಪಸ್ಸು ಬಂದೆ. ಆ ಸಮಯದಲ್ಲಿ ಸಾಕ್ಷಿಗಳು ಅವರವರ ಮನೆಗಳಿಗೆ ಹೋಗಿದ್ದರು ಎಂದರೆ ಸರಿ. ಮಾರನೇ ದಿನ ಅವರನ್ನೆಲ್ಲಾ ಕರೆದುಕೊಂಡು ಬಂದು, ಹಣ ಕೊಟ್ಟು ಪತ್ರ ಬರೆಯಿಸಿಕೊಂಡೆ . ನಿಪಿ1 ನ್ನು ನನ್ನ ಮಗ ವಿಶ್ವನಾಥ ಹರಪನಹಳ್ಳಿಯಲ್ಲಿ ಟೈಪ್ ಮಾಡಿಸಿದ್ದ. ನಿಪಿ1 ನ್ನು ನಾನು ಹೇಳಿದಂತೆ ನನ್ನ ಮಗ ಟೈಪ್ ಮಾಡಿಸಿದ್ದ. ಹಾಗಾದರೆ ಈಶಪ್ಪ ನಿಪಿ1 ನ್ನು ಬಿಳಿ ಹಾಳೆಯಲ್ಲಿ ಬರೆದುಕೊಂಡು ನಂತರ ಟೈಪ್ ಮಾಡಿಸಿಲ್ಲವೇ? ಎಂದರೆ ಇಲ್ಲ. ಈಗ ಈಶಪ್ಪ ಮೃತಪಟ್ಟಿದ್ದಾನೆ ಎಂದರೆ ಸರಿ.

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**